<u>ಎಸ್ ಸಿ ನಂ. **5078/2021**</u>

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂಃ** 5

**ಪಿ ಡಬ್ಲೂಃ** 3

| | |
|---|---|
| ಸಾಕ್ಷಿಯ ಹೆಸರು - | ಜಯಮ್ಮ |
| ಗಂಡನ ಹೆಸರು - | ವೀರಣ್ಣ |
| ವಯಸ್ಸು - | 58 ವರ್ಷ |
| ಉದ್ಯೋಗ - | ಗೃಹಿಣಿ |
| ವಾಸಸ್ಥಳ - | ನಂದಿಹಳ್ಳಿ ಗ್ರಾಮ |

**<u>ಸಾಕ್ಷಿಯನ್ನು ದಿನಾಂಕಃ 16-03-2026 ರಂದು ಪ್ರಾಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಪಿ. ಪಿ. ಅವರಿಂದ</u>**

ಆರೋಪಿತರು ನನಗೆ ಗೊತ್ತು. ಚಾಸಾ **-1** ನನ್ನ ಮಗಳು. ಚಾಸಾ **-4** ನನ್ನ ತಂಗಿ.

**2** ಮತ್ತು **3** ನೇ ಆರೋಪಿತರು **1** ನೇ ಆರೋಪಿಯ ಅಣ್ಣ ಮತ್ತು ಅಕ್ಕ. **1** ನೇ ಆರೋಪಿಯೊಂದಿಗೆ ಚಾಸಾ **-1** ರವರ ಮದುವೆ **2014** ರಲ್ಲಿ ಜರುಗಿತ್ತು. ಆ ಸಮಯದಲ್ಲಿ ರೂ. **1,80,000/-** ನಗದು, **5** ತೊಲೆ ಬಂಗಾರ ಹಾಗೂ ಮೋಟಾರ್ ಸೈಕಲ್ ಖರೀದಿಗೆ ರೂ. **50,000/-** ಚೆಕ್ ನೀಡಿದ್ದರು. **1** ತಿಂಗಳು ಮಾತ್ರ ಚೆನ್ನಾಗಿ ಸಂಸಾರ ಮಾಡಿದ್ದು, ನಂತರ ಆರೋಪಿತರೆಲ್ಲ ಸೇರಿ ಪಿರ್ಯಾದಿಗೆ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡಲು ಪ್ರಾರಂಭಿಸಿದರು. ಹೆಚ್ಚುವರಿಯಾಗಿ ರೂ. **5** ಲಕ್ಷ ಹಾಗೂ ಹಡಗಲಿಯ ಮನೆ ಹಾಗೂ **5** ಎಕರೆ ಜಮೀನನ್ನು ವರದಕ್ಷಿಣೆಯಾಗಿ ತರಬೇಕೆಂದು ಕೇಳಿದ್ದರು. ದೈಹಿಕವಾಗಿ ಹಲ್ಲೆ ಮಾಡಿದ್ದರು. ಈ ವಿಚಾರ ಪಿರ್ಯಾದಿ ನನಗೆ ಫೋನ್ ಮೂಲಕ ಹಾಗೂ ಸಿಕ್ಕಿದಾಗಲೆಲ್ಲಾ ಹೇಳುತ್ತಿದ್ದಳು. ತವರು ಮನೆಯಲ್ಲಿಯೂ ಸಹ ಹೇಳಿದ್ದಳು. ಈ ಬಗ್ಗೆ **3-4** ಪಂಚಾಯತಿ ನಡೆದು ಬುದ್ದಿ ಹೇಳಲಾಗಿತ್ತು.

**ಎಸ್ ಸಿ ನಂ. 5078/2021**

ದಿಃ **08-02-2016** ರಂದು ಪಿರ್ಯಾದಿಗೆ ಹಲ್ಲೆ ಮಾಡಿ ಹೆಚ್ಚಿನ ವರದಕ್ಷಿಣೆ ತರುವಂತೆ ತವರು ಮನೆಗೆ ಕಳುಹಿಸಿರುತ್ತಾರೆ. ನಂತರ ಪಂಚಾಯತಿ ನಡೆದು ಚಾಸಾ **-5** ಮತ್ತು ನಾನು ಆಕೆಯನ್ನು ಗಂಡನ ಮನೆಗೆ ದಿಃ **06-03-2014** ರಂದು ಬಿಟ್ಟು ಬಂದಿದ್ದೇವು. ಮಧ್ಯಾಹ್ನ **02.30** ರ ಸಮಯದಲ್ಲಿ ಆರೋಪಿತರೆಲ್ಲರೂ ಮನೆಯಲ್ಲಿದ್ದು, ನಮ್ಮನ್ನು ನೋಡಿ ನಿಂದಿಸಿ, ಪಿರ್ಯಾದಿಯ ಕೂದಲು ಹಿಡಿದು ಎಳೆದಾಡಿ, ಕಾಲಿನಿಂದ ಒದ್ದು, ಗೋಡೆಗೆ ತಲೆ ಚಚ್ಚಿದರು. ನನ್ನ ಬೆನ್ನು ಮತ್ತು ಕೆನ್ನೆಗೆ ಹಲ್ಲೆ ಮಾಡಿದರು. ನಾನು ಬಿಡಿಸಲು ಹೋದಾಗ ಪ್ರಾಣ ಬೆದರಿಕೆ ಹಾಕಿದರು. **1** ನೇ ಆರೋಪಿ ಕೊಲೆ ಮಾಡುವ ಉದ್ದೇಶದಿಂದ ಪಿರ್ಯಾದಿಯ ಕುತ್ತಿಗೆ ಹಿಚುಕಿದ. ಬಿಡಿಸಲು ಹೋದ ನಮ್ಮ ಮೇಲೆ ಹಲ್ಲೆ ಮಾಡಿದರು.

ನಂತರ ಗ್ರಾಮದ ಹಿರಿಯರನ್ನು ಸಂಪರ್ಕಿಸಿ ದೂರು ನೀಡಿರುತ್ತೇವೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿದ್ದಾರೆ. ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ. **1** ನೇ ಆರೋಪಿ ಈಗಾಗಲೇ ಕರಿಬಸಮ್ಮ ಎಂಬಾಕೆಯನ್ನು ಎರಡನೇ ಮದುವೆಯಾಗಿರುತ್ತಾನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ ವಿ ಪಿ., ವಕೀಲರಿಂದಃ**

**ಈ ಹಂತದಲ್ಲಿ ನ್ಯಾಯಾಲಯದ ಕಾಲಾವಕಾಶ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು**.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.